‘ನಮ್ಮ ಮೇಷ್ಟ್ರುದು. ಅವರು ಹಾರ್ಟ್ ಪೇಷೆಂಟ್. ಅವರ ಮನೆ ಲಕ್ಷ್ಮೀಪುರಂನಲ್ಲಿದೆ. ನಾನು ಪೂರ್ವಿಗೆ ಹೇಳಿದೆ. ಅವಳು ತಕ್ಷಣ ನನ್ನ ಜೊತೆ ಬಂದಳು. ಹತ್ತಿರದ ಎವರ್‌ಗ್ರೀನ್ ನರ್ಸಿಂಗ್‌ಹೋಂಗೆ ಸೇರಿಸಿದೆವು. ನನ್ನ ಫ್ರೆಂಡ್ ಡಾ. ಶರತ್ ನೋಡಿದ್ರು. ಮೈಲ್ಡ್ ಹಾರ್ಟ್ ಅಟ್ಯಾಕ್ ಆಗಿದೆ ಅಂದ್ರು. ನಾನು ಅಡ್ಮಿಟ್ ಮಾಡಿ ಅವರ ಮಗಳಿಗೆ ಫೋನ್ ಮಾಡಿದೆ. ಡಾಕ್ಟರ್ ಬರೆದುಕೊಟ್ಟ ಮೆಡಿಸಿನ್ಸ್ ಪೂರ್ವಿನೇ ತಂದಳು. ಆಮೇಲೆ ನಾನು ಆ ಕಡೆ ಗಮನ ಕೊಡಲಿಲ್ಲ. ಪೂರ್ವಿ ಹೋಗಿ ಅದ್ಯಾವುದೋ ಸಂಸ್ಥೆಯಿಂದ ವಾರ್ಡ್‌ಚಾರ್ಜ್ ಕಟ್ಟಿಸಿದಳು. ಅವರಿಗೆ ಬ್ಲಡ್ ಬೇಕಾದಾಗ ಅರೇಂಜ್ ಮಾಡಿದಳು.’



‘ಹೌದಾ?’

‘ಅಷ್ಟೇ ಅಲ್ಲ. ನಮ್ಮ ಈ ಸೆಂಟರ್‌ನಲ್ಲಿ ರಿಸೆಪ್ಷನಿಸ್ಟ್ ಇರಲಿಲ್ಲ. ಕಸ ಗುಡಿಸುವ ಹುಡುಗಾನೇ ಬಂದವರನ್ನು ನಮ್ಮ ರೂಮ್‌ಗಳಿಗೆ ಕಳುಹಿಸುತ್ತಿದ್ದ. ಪೂರ್ವಿ ಬಲವಂತ ಮಾಡಿ ರಿಸೆಪ್ಷನಿಸ್ಟ್‌ನ ನೇಮಿಸಿಕೊಳ್ಳುವ ಹಾಗೆ ಮಾಡಿದಳು.’

‘ಅದರಿಂದ ಪೂರ್ವಿಗೆ ಏನು ಲಾಭ?’

‘ಸೀಮಾ ಯಾರೂಂತ ತಿಳಿದಿದ್ದೀಯಾ? ಮೇಷ್ಟು ಮಗಳು.’

‘ಹೌದಾ?’

‘ಪೂರ್ವಿ ಯಾವ್ಯಾವುದೋ ಗ್ರೂಪ್‌ಗಳಿಗೆ ಮೆಂಬರಾಗಿದ್ದಾಳೆ. ಒಂದು ಗ್ರೂಪ್ ಜೊತೆ ಆಸ್ಪತ್ರೆಗಳಿಗೆ ಹಣ್ಣು ಕೊಡಲು ಹೋಗ್ತಾಳೆ. ಇನ್ನೊಂದು ಗ್ರೂಪ್ ಜೊತೆ ಸರ್ಕಾರಿ ಶಾಲೆಗಳಿಗೆ ಹೋಗಿ ನೋಟ್ ಪುಸ್ತಕಗಳನ್ನು ಹಂಚುತ್ತಾಳೆ.’

‘ನನಗೆ ನಂಬಕ್ಕೇ ಆಗ್ತಿಲ್ಲ.’

‘ಅವಳನ್ನು ನಿಮ್ಮ ಮನೆಯಲ್ಲಿ ಯಾರೂ ಅರ್ಥಮಾಡಿಕೊಂಡಿಲ್ಲ ಅನ್ನಿಸತ್ತೆ. ಒಂದು ದಿನ ನನ್ನ ಹತ್ತಿರ 2000 ರೂಪಾಯಿ ಕೊಡೀಂತ ಕೇಳಿದಳು. ನಾನು ಯಾಕೆ? ಅಂತ ಕೇಳಿದೆ. ನೀವು ಮಧ್ಯಾಹ್ನ 2 ಗಂಟೆಗೆ ವಿಜಯನಗರದ 3ನೇ ಸ್ಟೇಜ್‌ನಲ್ಲಿರುವ ಗಣಪತಿ ದೇವಸ್ಥಾನದ ಹತ್ತಿರ ಬನ್ನಿ ಗೊತ್ತಾಗತ್ತೆ ಅಂದಳು.’

‘ನೀನು ಹೋಗಿದ್ದೆಯಾ?’

‘ನನಗೆ ಹೋಗಕ್ಕಾಗಲಿಲ್ಲ. ನನ್ನ ಫ್ರೆಂಡ್ ಅಮರ್ ಮನೆ ದೇವಸ್ಥಾನದ ಹತ್ತಿರವೇ ಇರೋದು. ಅವನಿಗೆ, ಇವತ್ತು ಗಣಪತಿ ದೇವಾಲಯದಲ್ಲಿ ಏನು ವಿಶೇಷ?’ ಅನ್ನುವ ಸುದ್ದಿ ಕಲೆಕ್ಟ್ ಮಾಡಕ್ಕಾಗತ್ತಾಂತ ಕೇಳಿದೆ. ಅವನು ತಾಯಿಗೆ ಫೋನ್ ಮಾಡಿದ.’

‘ಏನು ವಿಶೇಷವಿತ್ತು?’

‘ಪೂರ್ವಿ ಗುಂಪಿನವರು ಪಕ್ಕದ ಅನಾಥಾಲಯದ ಮಕ್ಕಳನ್ನು ಅಲ್ಲಿಗೆ ಆಹ್ವಾನಿಸಿ ಊಟ ಕೊಟ್ಟು, ಪುಸ್ತಕ, ಪೆನ್ನು, ಜಾಮಿಟ್ರಿ ಬಾಕ್ಸ್ ಕೊಟ್ಟಿದ್ದರು.’

‘ಪೂರ್ವಿ ಆ ಗುಂಪಿನಲ್ಲಿದ್ದಳಾ?’

‘ಅಮರ್ ತಾಯಿ ಕೆಲವು ಫೋಟೊಗಳನ್ನು ಕಳಿಸಿದ್ದರು. ಆ ಫೋಟೊಗಳಲ್ಲಿ ಪೂರ್ವಿ ಇದ್ದಳು.’

‘ಪೂರ್ವಿ ಇಂತಹ ಕೆಲಸಗಳನ್ನು ಮಾಡ್ತಾಳೇಂತ ನನಗೆ ಗೊತ್ತಿರಲಿಲ್ಲ.’

‘ಪೂರ್ವಿ ತುಂಬಾ ಒಳ್ಳೆಯ ಹುಡುಗಿ. ಅವಳನ್ನು ನಾನು ಕಳೆದುಕೊಳ್ಳಲು ಸಿದ್ಧನಾಗಿಲ್ಲ. ನನ್ನದೂ ಕೊಂಚ ತಪ್ಪಿದೆ. ನೀವೆಲ್ಲಾ ಯಾರೂ ಈ ಬಗ್ಗೆ ಮಾತಾಡಬೇಡಿ. ನಾನೇ ಇದೆಲ್ಲಾ ಸರಿ ಮಾಡ್ತೀನಿ.’

‘ಆದರೆ ಒಂದು ಮನವಿ...’

‘ಏನಕ್ಕಾ?’

‘ಪೂರ್ವಿ, ಕೊಂಚ ತಗ್ಗಿದ್ದಾಳೆ. ಮನಸ್ಸಿಟ್ಟು ಅಡುಗೆ, ತಿಂಡಿ, ಮನೆ ಕೆಲಸ ಕಲಿಯುತ್ತಿದ್ದಾಳೆ. ಕಡೆಯ ಪಕ್ಷ 15–20 ದಿನ ನೀನು ಅವಳಿಗೆ ಕಾಲ್ ಮಾಡಬೇಡ.’

‘ಮಾಡಲ್ಲ. ನಾನು ನನ್ನನ್ನು ತಿದ್ದಿಕೊಳ್ಳಲು ಕೊಂಚ ಕಾಲಾವಕಾಶ ಬೇಕು. ಅಕ್ಕ, ನೀನು ನನ್ನನ್ನು ಭೇಟಿ ಮಾಡಿದ್ದು ಪೂರ್ವಿ ಹತ್ತಿರ ಹೇಳಬೇಡ.’

‘ಆಗಲಪ್ಪ’ ಎಂದಳು ಶಾಲಿನಿ.

ಇಪ್ಪತ್ತು ದಿನಗಳ ನಂತರ ಪೂರ್ವಿ ತಾನಾಗಿ ಹೋಗಿ ಶಶಾಂಕನನ್ನು ಭೇಟಿ ಮಾಡಲು ನಿರ್ಧರಿಸಿದಳು. ಒಂದು ಬೆಳಿಗ್ಗೆ ಶಾಲಿನಿ ಅತ್ತೆಯ ಬಳಿ ಹೇಳುತ್ತಿದ್ದುದು ಕೇಳಿಸಿತು. ‘ನಮ್ಮಂದೆ ತಾಯಿ ಅವರ ಭಜನಾ ಮಂಡಳಿಯವರ ಜೊತೆ ಉಡುಪಿ, ಧರ್ಮಸ್ಥಳ ಮುಂತಾದ ಕಡೆಗೆ ಟೂರ್ ಹೊರಟಿದ್ದಾರೆ. ಶಶಾಂಕ್‌ಗೆ ನಮ್ಮನೆಗೇ ತಿಂಡಿ–ಊಟಕ್ಕೆ ಬಾರೋಂತ ಕರೆದೆ. ಬರಲ್ಲ ಅಂದುಬಿಟ್ಟ.’

‘ನಮ್ಮನೆಯಿರುವುದು ವಿಜಯನಗರದಲ್ಲಿ, ಅವನಿರೋದು ಕುವೆಂಪುನಗರದಲ್ಲಿ. ಹೇಗೆ ಬರಕ್ಕೆ ಸಾಧ್ಯ? ನೀನೇ ಹೋಗಿ ಮೂರು ದಿನ ಅಲ್ಲಿದ್ದು ಅವನನ್ನು ನೋಡಿಕೋ’ ಗಿರಿಜಮ್ಮ ಹೇಳಿದರು.

‘ಆಗಲಿ ಅತ್ತೆ. ಅವನ ಹತ್ತಿರ ಮಾತಾಡ್ತೀನಿ’ ಎಂದಳು ಶಾಲಿನಿ.

ಅಂದು ಸಾಯಂಕಾಲ ಪೂರ್ವಿ ಸರಳವಾಗಿರುವ ಒಂದು ಬೆಂಗಾಲ್ ಕಾಟನ್ ಸೀರೆ ಉಟ್ಟು ಶಶಾಂಕ್ ಮನೆಗೆ ಹೋದಳು. ಶಶಾಂಕ್ ಆಗ ತಾನೆ ಆಸ್ಪತ್ರೆಯಿಂದ ಬಂದಿದ್ದ. ಪೂರ್ವಿಯನ್ನು ನೋಡಿ ಅವನ ಕಣ್ಣುಗಳು ಅರಳಿದವು.

‘ಪೂರ್ವಿ, ನೀನು!’

‘ಈಗ ಬಂದ್ರಾ? ಕಾಫಿ ಮಾಡಿ ತರಲಾ?’

‘ಓ.ಕೆ.’

ಅವಳು ಕಾಫಿಯ ಜೊತೆ ಮನೆಯಿಂದ ತಂದಿದ್ದ ಕೋಡುಬಳೆ, ಕೊಬ್ಬರಿ ಮಿಠಾಯಿ ಕೊಟ್ಟಳು.

‘ಪೂರ್ವಿ ಕಾಫಿ ತುಂಬಾ ಚೆನ್ನಾಗಿದೆ.’

‘ಥ್ಯಾಂಕ್ ಯು.’

‘ಈ ಸೀರೆಯಲ್ಲಿ ನೀನು ತುಂಬಾ ಮುದ್ದಾಗಿ ಕಾಣ್ತಿದ್ದೀಯ.’

ಅವಳು ನಾಚಿ ಕೆಂಪಾದಳು. ಅವಳಿಗಾದ ಸಂತೋಷ ಕೆನ್ನೆಗಳಲ್ಲಿ ಅರಳಿ, ತುಟಿಗಳಲ್ಲಿ ಮಿಂಚಿತು. ಅವನು ಕೋಡುಬಳೆ, ಮಿಠಾಯಿ ಖಾಲಿ ಮಾಡಿ ಕೈ ತೊಳೆದು ಬಂದ.

‘ನಾನು ಫ್ರೆಷ್ ಆಗಿ ಬರ್ತೀನಿ. ಹೊರಗೆ ಹೋಗೋಣವಾ?’

‘ಹೂಂ.’

ಅವಳು ಕೈಲಿದ್ದ ಪೇಪರ್ ಕೆಳಗಿಟ್ಟು ಕಿಟಕಿಯ ಬಳಿ ನಿಂತು ಹೊರಗಡೆ ಕಣ್ಣು ಹಾಯಿಸಿದಳು. ಶಾಲೆಯಿಂದ ಮಕ್ಕಳನ್ನು ಕರೆತರುತ್ತಿದ್ದ ತಾಯಿಯರು ಕಾಣಿಸಿದರು. ಆ ಮಕ್ಕಳ ಮುದ್ದು ಮುಖಗಳು ಅವುಗಳ ತುಂಟಾಟ ಗಮನಿಸಿ ಅವಳು ಮುಗುಳ್ನಕ್ಕಳು.

‘ಪೂರ್ವಿ ಈ ಕಡೆ ತಿರುಗು. ನಾನು ಹೇಗೆ ಕಾಣ್ತಿದ್ದೀನಿ ಹೇಳು.’

ಬಿಳಿ ಪೈಜಾಮ, ಕುರ್ತಾದಲ್ಲಿ ಮುದ್ದಾಗಿ ಕಾಣ್ತಿದ್ದವನನ್ನು ನೋಡಿ ಅವಳು ನಗುತ್ತಾ ಹೇಳಿದಳು, ‘ತುಂಬಾ ಚೆನ್ನಾಗಿ ಕಾಣ್ತಿದ್ದೀರ.’

‘ಹಾಗಾದ್ರೆ ನಾನು ವರಪರೀಕ್ಷೆಯಲ್ಲಿ ಪಾಸಾಗಿದ್ದೀನಾ?’

‘ಏನು ಹಾಗಂದ್ರೆ?’

‘ನೀನು ಮದುವೆ ಕ್ಯಾನ್ಸಲ್ ಮಾಡಕ್ಕೆ ಹೇಳಿದ್ದೀಯಂತೆ.’

ಅವಳು ಅವನ ಎದೆಗೆ ತಲೆಯಾಡಿಸಿ ಹೇಳಿದಳು, ‘ನನ್ನ ಕ್ಷಮಿಸಿ. ನಿಮ್ಮನ್ನು ಅರ್ಥ ಮಾಡಿಕೊಳ್ಳದೆ ಏನೇನೋ ಹೇಳಿಬಿಟ್ಟೆ.’

‘ನನ್ನದೂ ತಪ್ಪಿದೆ ಪೂರ್ವಿ. ನಿನ್ನನ್ನು ಅರ್ಥ ಮಾಡಿಕೊಳ್ಳಲು ನಾನು ಪ್ರಯತ್ನಿಸಲೇ ಇಲ್ಲ. ನನಗೆ ನಿನ್ನನ್ನು ಬಿಟ್ಟಿರಕ್ಕಾಗಲ್ಲ...’

‘ಹಾಗಾದ್ರೆ ಬೇಗ ಮದುವೆ ಮಾಡಿಕೊಳ್ಳಿ.’

‘ಓ.ಕೆ. ಮ್ಯಾಡಂ. ಅಕ್ಕನ ಹತ್ತಿರ ಹೇಳ್ತೀನಿ.’

ರಾತ್ರಿ ಜೊತೆಯಾಗಿ ಊಟಕ್ಕೆ ಬಂದವರನ್ನು ನೋಡಿ ಅನುಪಮಾ–ಶಾಲಿನಿ ಒಟ್ಟಿಗೆ ಕೂಗಿದರು. ‘ಅತ್ತೆ, ಪೂರ್ವಿ ಯಾವುದೋ ಹೊಸ ಹುಡುಗನ ಜೊತೆ ಬಂದಿದ್ದಾಳೆ.’

ರೂಮ್‌ನಿಂದ ಹೊರಗೆ ಬಂದ ಗಿರಿಜಮ್ಮ ಮಗಳ ಜೊತೆ ನಿಂತಿದ್ದ ಶಶಾಂಕ್‌ನನ್ನು ನೋಡಿ ಕಣ್ಣರಳಿಸಿದರು. ಅವರ ಕಣ್ಣಂಚಿನಲ್ಲಿದ್ದ ಆನಂದಬಾಷ್ಪ ಯಾರಿಗೂ ಕಾಣಲಿಲ್ಲ.

ಪ್ರತಿಕ್ರಿಯಿಸಿ: **feedback@sudha.co.in**